**ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ**
ಶ್ರೀ ಚಾಮರಾಜೇಂದ್ರ ಸಂಸ್ಕೃತ ಮಹಾವಿದ್ಯಾಲಯ ಆವರಣ
ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು – 560018.

**कर्नाटक-संस्कृत-विश्वविद्यालय:**
श्री चामराजेन्द्र संस्कृत महाविद्यालयस्य परिसर:
पम्पमहाकविमार्ग:, चामराजपेटे, बेङ्गलूरु – ५६००१८.

## ೦೫.೦೭.೨೦೧೬ರಂದು ನಡೆದ ಪ್ರಶಾಸನ ಸಮಿತಿ (ಸಿಂಡಿಕೇಟ್) ೩೩ನೇ ಸಭೆಯ ನಡಾವಳಿ

ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ **ಪ್ರಶಾಸನ ಸಮಿತಿ ೩೩ನೇ ಸಭೆಯು** ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ **ಜುಲೈ ೦೫, ೨೦೧೬ರ ಮಂಗಳವಾರ ಬೆಳಿಗ್ಗೆ** ೧೧.೦೦ ಗಂಟೆಗೆ ವಿಶ್ವವಿದ್ಯಾಲಯದ ಕಾರ್ಯಾಲಯದಲ್ಲಿ ನಡೆಯಿತು. ಈ ಸಭೆಯಲ್ಲಿ ಕೆಳಕಂಡ ಮಾನ್ಯ ಸದಸ್ಯರು ಹಾಜರಿದ್ದರು.

**ಹಾಜರಿದ್ದವರು:**

| | |
|---|---|
| ೧. **ಪ್ರೊ. ಪದ್ಮಾಶೇಖರ್**, ಮಾನ್ಯ ಕುಲಪತಿಗಳು | ಅಧ್ಯಕ್ಷರು |
| ೨. **ಪ್ರೊ. ಕೆ.ಈ. ರಾಧಾಕೃಷ್ಣ**, ಶಿಕ್ಷಣತಜ್ಞರು, ಬೆಂಗಳೂರು | ಸದಸ್ಯರು |
| ೩. **ಡಾ. ವನಿತಾ ರಾಮಸ್ವಾಮಿ**, ನಿವೃತ್ತ ಪ್ರಾಧ್ಯಾಪಕರು, ಬೆಂಗಳೂರು | ಸದಸ್ಯರು |
| ೪. **ಶ್ರೀ ಕೆ. ಭೀಮಪ್ಪ**, ನಿವೃತ್ತ ಶಿಕ್ಷಣಾಧಿಕಾರಿಗಳು, ಚಿತ್ರದುರ್ಗ | ಸದಸ್ಯರು |
| ೫. **ಶ್ರೀ ಪರಪ್ಪ ಬಸಪ್ಪ ಬಾವಲತ್ತಿ**, ನಿವೃತ್ತ ಅಧ್ಯಾಪಕರು, ರಾಮಪುರ, ರಬಕವಿ | ಸದಸ್ಯರು |
| ೬. **ಶ್ರೀಮತಿ ಜಯಶ್ರೀ ವಿ. ಕೊರತಿ**, ಪ್ರಾಚಾರ್ಯರು, ದಾಂಡೇಲಿ | ಸದಸ್ಯರು |
| ೭. **ವಿದ್ವಾನ್ ಸಿದ್ಧಮಲ್ಲ ಸ್ವಾಮಿ**, ನಿವೃತ್ತ ಪ್ರಾಧ್ಯಾಪಕರು, ಮೈಸೂರು | ಸದಸ್ಯರು |
| ೮. **ಡಾ. ಮೈಕೆಲ್**, ಪ್ರಾಧ್ಯಾಪಕರು ಮತ್ತು ಡೀನ್, ಗುಲ್ಬರ್ಗಾ ವಿಶ್ವವಿದ್ಯಾಲಯ, ಕಲಬುರಗಿ | ಸದಸ್ಯರು |
| ೯. **ವಿದ್ವಾನ್ ಗಜಾನನ ಲಕ್ಷ್ಮೀನಾರಾಯಣ ಭಟ್ಟ**, ನಿವೃತ್ತ ಪ್ರಾಚಾರ್ಯರು, ಉಮ್ಮಚಗಿ | ಸದಸ್ಯರು |
| ೧೦. **ನಿರ್ದೇಶಕರು**, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯ ನಿರ್ದೇಶನಾಲಯ, ಮೈಸೂರು | |
| – ಇವರ ಪರವಾಗಿ **ಶ್ರೀಮತಿ ಮಂಜುಳಾ ಡಿ.ಎನ್**, ಸಹಾಯಕ ನಿರ್ದೇಶಕರು | ಸದಸ್ಯರು |
| ೧೧. **ನಿರ್ದೇಶಕರು**, ಸಾರ್ವಜನಿಕ ಶಿಕ್ಷಣ ಇಲಾಖೆ, ನೃಪತುಂಗ ರಸ್ತೆ, ಬೆಂಗಳೂರು–560001 | |
| – ಇವರ ಪರವಾಗಿ **ಶ್ರೀಮತಿ ಮಂಜುಳಾ ಆರ್**, ಹಿರಿಯ ಸಹಾಯಕ ನಿರ್ದೇಶಕರು | ಸದಸ್ಯರು |
| ೧೨. **ಪ್ರೊ. ವೈ.ಎಸ್. ಸಿದ್ದೇಗೌಡ**, ಕುಲಸಚಿವರು | ಸದಸ್ಯ ಕಾರ್ಯದರ್ಶಿ |

**ಗೈರುಹಾಜರಿ:**

| | |
|---|---|
| ೧. **ಡಾ. ಕೆ. ಸುಧಾಕರ್**, ಶಾಸಕರು(ಚಿಕ್ಕಬಳ್ಳಾಪುರ), ಬೆಂಗಳೂರು | ಸದಸ್ಯರು |
| ೨. **ಅಪರ ಮುಖ್ಯ ಕಾರ್ಯದರ್ಶಿಗಳು**, ಉನ್ನತ ಶಿಕ್ಷಣ ಇಲಾಖೆ, ಬೆಂಗಳೂರು | ಸದಸ್ಯರು |
| ೩. **ಅಪರ ಮುಖ್ಯ ಕಾರ್ಯದರ್ಶಿಗಳು**, ಹಣಕಾಸು ಇಲಾಖೆ, ಬೆಂಗಳೂರು | ಸದಸ್ಯರು |
| ೪. **ಕಾರ್ಯದರ್ಶಿಗಳು**, ಕಂದಾಯ ಇಲಾಖೆ (ಧಾರ್ಮಿಕ ದತ್ತಿ ವಿಭಾಗ), ಬೆಂಗಳೂರು | ಸದಸ್ಯರು |
| ೫. **ಪ್ರಾದೇಶಿಕ ನಿರ್ದೇಶಕರು**, ಯುಜಿಸಿ–ನೈಋತ್ಯ ಪ್ರಾದೇಶಿಕ ಕೇಂದ್ರ, ಬೆಂಗಳೂರು–09 | ಸದಸ್ಯರು |
| ೬. **ಆಯುಕ್ತರು**, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು | ಸದಸ್ಯರು |
| ೭. **ಆಯುಕ್ತರು**, ಕಾಲೇಜು ಶಿಕ್ಷಣ ಇಲಾಖೆ, ಶೇಷಾದ್ರಿ ರಸ್ತೆ, ಬೆಂಗಳೂರು–560001 | ಸದಸ್ಯರು |
| ೮. **ನಿರ್ದೇಶಕರು**, ತಾಂತ್ರಿಕ ಶಿಕ್ಷಣ ಇಲಾಖೆ, ತಾಂತ್ರಿಕ ಶಿಕ್ಷಣ ಭವನ, ಬೆಂಗಳೂರು–560001 | ಸದಸ್ಯರು |
| ೯. **ನಿರ್ದೇಶಕರು**, ಪದವಿಪೂರ್ವ ಶಿಕ್ಷಣ ಇಲಾಖೆ, 18ನೇ ಅಡ್ಡರಸ್ತೆ, ಬೆಂಗಳೂರು–560012 | ಸದಸ್ಯರು |
| ೧೦. **ನಿರ್ದೇಶಕರು**, ವೈದ್ಯಕೀಯ ಶಿಕ್ಷಣ ಇಲಾಖೆ, ಆನಂದರಾವ್ ವೃತ್ತ, ಬೆಂಗಳೂರು–560009 | ಸದಸ್ಯರು |

ಸಭೆಯ ಆರಂಭಕ್ಕೆ ಮುನ್ನ ಮಾನ್ಯ ಕುಲಸಚಿವರು ಎಲ್ಲ ಗೌರವಾನ್ವಿತ ಸದಸ್ಯರನ್ನು ಸ್ವಾಗತಿಸಿದರು. ಅನಂತರ ಸಭೆಯಲ್ಲಿ ಕೆಳಕಂಡ ಕಾರ್ಯಸೂಚಿಗಳು ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ ಮಂಡಿತವಾಗಿ ನಿರ್ಣಯಗೊಂಡವು.

| | | |
|---|---|---|
| ವಿಷಯ 01 | ವಿಷಯ ಮತ್ತು ಟಿಪ್ಪಣಿ | **ಪ್ರಶಾಸನ ಸಮಿತಿ 32ನೇ ಸಭೆಯ ಅನುಪಾಲನಾ ವರದಿಯನ್ನು ಅನುಮೋದಿಸುವ ಬಗೆಗೆ.**<br>ಪ್ರಶಾಸನ ಸಮಿತಿ 32ನೇ ಸಭೆಯು ದಿನಾಂಕ: 16.03.2016ರಂದು ನಡೆಯಿತು. ಸಭೆಯ ನಿರ್ಣಯದಂತೆ ಕೈಗೊಳ್ಳಲಾದ ಅನುಪಾಲನಾ ವರದಿಯನ್ನು ಪ್ರಶಾಸನ ಸಮಿತಿಯ ಅನುಮೋದನೆಗಾಗಿ ಮಂಡಿಸಿದೆ. |
| | ನಿರ್ಣಯ | **ಪ್ರಶಾಸನ ಸಮಿತಿ 32ನೇ ಸಭೆಯ ಅನುಪಾಲನಾ ವರದಿಯನ್ನು ಸಭೆಯು ಅನುಮೋದಿಸಿತು.** |

| | | |
|---|---|---|
| ವಿಷಯ 02 | ವಿಷಯ ಮತ್ತು ಟಿಪ್ಪಣಿ | **'ಹಣಕಾಸು ಸಮಿತಿ' 21ನೇ ಸಭೆಯ ನಡಾವಳಿಗಳನ್ನು ಅನುಮೋದಿಸುವ ಬಗೆಗೆ.**<br>ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ 'ಹಣಕಾಸು ಸಮಿತಿ' 21ನೇ ಸಭೆಯು ದಿನಾಂಕ: 15.06.2016ರಂದು ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ ನಡೆಯಿತು. ಈ ಸಭೆಯ ನಡಾವಳಿಗಳನ್ನು ಪ್ರಶಾಸನ ಸಮಿತಿಯ ಅನುಮೋದನೆಗಾಗಿ ಮಂಡಿಸಿದೆ. |
| | ನಿರ್ಣಯ | **'ಹಣಕಾಸು ಸಮಿತಿ' 21ನೇ ಸಭೆಯ ನಡಾವಳಿಗಳನ್ನು ಅನುಮೋದಿಸಿತು.** |
| ವಿಷಯ 03 | ವಿಷಯ ಮತ್ತು ಟಿಪ್ಪಣಿ | **"ಸ್ಪಿಯರ್‌ಹೆಡ್ ಎಡ್ಯು ಆನ್‌ಲೈನ್ ಪ್ರೈ.ಲಿ" (apnacourse.com) ಸಂಸ್ಥೆಯೊಂದಿಗೆ ಒಡಂಬಡಿಕೆ ಮಾಡಿಕೊಂಡು Online Courses ನಡೆಸುವ ಬಗೆಗೆ.**<br>ಕರ್ನಾಟಕ ಸರ್ಕಾರದ ಉನ್ನತ ಶಿಕ್ಷಣ ಇಲಾಖೆಯು, ಮಾಹಿತಿ ತಂತ್ರಜ್ಞಾನವನ್ನು ವಿಶ್ವವಿದ್ಯಾಲಯದ ಸಂಶೋಧನೆ, ಬೋಧನೆ ಮತ್ತು ಆಡಳಿತದಲ್ಲಿ ಅಳವಡಿಸಿಕೊಳ್ಳಲು ಸೂಚಿಸಿರುವುದು ಸರಿಯಷ್ಟೇ. ಇತ್ತೀಚಿನ ದಿನಗಳಲ್ಲಿ ಅಂತರ್ಜಾಲಾಧಾರಿತ Online Courseಗಳು ಅತ್ಯಂತ ಜನಪ್ರಿಯವಾಗಿದ್ದು, ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯವು ಕೂಡ, ವಿಶ್ವವಿದ್ಯಾಲಯದ ಪ್ರಧಾನ ಉದ್ದೇಶವಾದ ಸಂಸ್ಕೃತ ಭಾಷೆ–ಶಾಸ್ತ್ರಗಳನ್ನು ಜನಮಾನಸಕ್ಕೆ ತಲುಪಿಸುವ ಉದ್ದೇಶದಿಂದ, Online Courseಗಳನ್ನು ಪ್ರಾರಂಭಿಸುವುದು ಸಮಯೋಚಿತವಾಗಿದೆ. ಈ ದಿಸೆಯಲ್ಲಿ, ಬೆಂಗಳೂರಿನಲ್ಲಿರುವ **"ಸ್ಪಿಯರ್‌ಹೆಡ್ ಎಡ್ಯು ಆನ್‌ಲೈನ್ ಪ್ರೈ.ಲಿ"** ಸಂಸ್ಥೆಯು ಆಸಕ್ತಿ ವಹಿಸಿ ವಿಶ್ವವಿದ್ಯಾಲಯದ ಜೊತೆಗೆ ಒಡಂಬಡಿಕೆ ಮಾಡಿಕೊಳ್ಳಲು ಉತ್ಸುಕವಾಗಿದೆ. ಈ ಒಡಂಬಡಿಕೆಯಿಂದ ವಿಶ್ವವಿದ್ಯಾಲಯಕ್ಕೆ ಯಾವುದೇ ರೀತಿಯ ಹಣಕಾಸಿನ ಹೊರೆ ಇರುವುದಿಲ್ಲ. ಬದಲಾಗಿ, ಬರುವ ಲಾಭಾಂಶದ ಶೇಕಡಾ 60 ಮೊತ್ತವನ್ನು ಸದರಿ ಸಂಸ್ಥೆಯು ವಿಶ್ವವಿದ್ಯಾಲಯಕ್ಕೆ ಪಾವತಿಸುತ್ತದೆ. ಇದರಿಂದ, ದೇಶವಿದೇಶಗಳಲ್ಲಿಯೂ ವಿಶ್ವವಿದ್ಯಾಲಯಕ್ಕೆ ಪ್ರಚಾರ ಸಿಗುತ್ತದೆ. ಈ ಹಿನ್ನೆಲೆಯಲ್ಲಿ ಸದರಿ ಸಂಸ್ಥೆಯೊಂದಿಗೆ ಒಡಬಂಡಿಕೆ ಮಾಡಿಕೊಳ್ಳುವುದು ವಿಶ್ವವಿದ್ಯಾಲಯದ ಎಲ್ಲ ದೃಷ್ಟಿಯಿಂದಲೂ ಸೂಕ್ತವಾಗಿದೆ. ಪ್ರಶಾಸನ ಸಮಿತಿಯ ಅನುಮೋದನೆಗಾಗಿ ಮಂಡಿಸಿದೆ. |
| | ನಿರ್ಣಯ | **ಸಭೆಯು ಈ ಬಗ್ಗೆ ವಿವರವಾಗಿ ಪರಿಶೀಲಿಸಿತು ಮತ್ತು Online Courses ನಡೆಸುವ ಸಂಬಂಧ, ಸರ್ಕಾರಕ್ಕೆ ವಿಸ್ತೃತವಾಗಿ ಪತ್ರ ಬರೆದು ಒಪ್ಪಿಗೆ ಪಡೆದ ನಂತರ, ಮುಂದಿನ ಕ್ರಮವಹಿಸಬಹುದೆಂದು ಸಭೆಯು ಸೂಚಿಸಿತು,** |
| ವಿಷಯ 04 | ವಿಷಯ ಮತ್ತು ಟಿಪ್ಪಣಿ | **ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಐದನೇ ದೀಕ್ಷಾಂತ ಘಟಿಕೋತ್ಸವವನ್ನು ನಡೆಸುವ ಬಗೆಗೆ.**<br>ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯವು ಈಗಾಗಲೇ ನಾಲ್ಕು ದೀಕ್ಷಾಂತ ಘಟಿಕೋತ್ಸವಗಳನ್ನು ಯಶಸ್ವಿಯಾಗಿ ನಡೆಸಿದೆ. 2014–15ನೇ ಸಾಲಿನ ಬಿ.ಎ., ಎಂ.ಎ., ಎಂ.ಫಿಲ್ ಪದವಿಗಳಲ್ಲಿ ತೇರ್ಗಡೆಯಾದ ವಿದ್ಯಾರ್ಥಿಗಳಿಗೆ ಘಟಿಕೋತ್ಸವ ಪ್ರಮಾಣಪತ್ರಗಳನ್ನು ನೀಡಬೇಕಿದ್ದು, ಐದನೇ ದೀಕ್ಷಾಂತ ಘಟಿಕೋತ್ಸವವನ್ನು ನಡೆಸಲು ಸಿದ್ಧತೆಗಳನ್ನು ಮಾಡಿಕೊಳ್ಳಲಾಗುತ್ತಿದೆ. ಘಟಿಕೋತ್ಸವ ಸಂದರ್ಭದಲ್ಲಿ ಮೂವರು ಹಿರಿಯ ವಿದ್ವಾಂಸರಿಗೆ ಗೌರವ ಡಿ.ಲಿಟ್ ನೀಡಬೇಕಾಗಿದ್ದು, 'ಗೌರವ ಡಿ.ಲಿಟ್' ಪದವಿ ಪ್ರದಾನಕ್ಕೆ ಸಂಬಂಧಿಸಿದಂತೆ ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತಿನ 11ನೇ ಸಾಮಾನ್ಯ ಸಭೆಯ ನಿರ್ಣಯ ಹಾಗೂ ಸರ್ಕಾರದ ಪತ್ರ ಸಂಖ್ಯೆ: ಇಡಿ 398 ಯುಆರ್‌ಸಿ 2014(3); ದಿನಾಂಕ: 19.02.2015ರ ಅನ್ವಯ 'ಶಿಕ್ಷಣತಜ್ಞರ ಸಮಿತಿ'ಯನ್ನು ರಚಿಸಬೇಕಿದೆ. ಈ ಸಮಿತಿಗೆ ಮೂವರು ಶಿಕ್ಷಣತಜ್ಞರ ಹೆಸರನ್ನು ಸೂಚಿಸಲು ಸಭೆಯನ್ನು ಕೋರಿದೆ.<br>ಈ ದೀಕ್ಷಾಂತ ಘಟಿಕೋತ್ಸವ ಸಮಾರಂಭಕ್ಕೆ ತಗಲುವ ಅಂದಾಜು ವೆಚ್ಚದ ಪಟ್ಟಿಯನ್ನು ಸಿದ್ಧಪಡಿಸಲಾಗಿದ್ದು, **ರೂ. 5.00** ಲಕ್ಷಗಳು ವೆಚ್ಚವಾಗಬಹುದೆಂದು ಅಂದಾಜಿಸಲಾಗಿದೆ. ಈ ಸಂಬಂಧ ಘನತೆವೆತ್ತ ರಾಜ್ಯಪಾಲರಿಂದ ಅನುಮೋದನೆ ಪಡೆಯಬೇಕಿದೆ. ಮುಂದಿನ ಕ್ರಮವಹಿಸಲು ಅನುಮೋದನೆಗೆ ಮಂಡಿಸಿದೆ. |
| | ನಿರ್ಣಯ | **ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯವು ನಡೆಸುವ ಐದನೇ ದೀಕ್ಷಾಂತ ಘಟಿಕೋತ್ಸವ ಸಮಾರಂಭಕ್ಕೆ ತಗಲುವ ಅಂದಾಜು ವೆಚ್ಚ ರೂ. 5.00 ಲಕ್ಷಗಳಿಗೆ ಸಭೆಯು ಅನುಮೋದನೆ ನೀಡಿತು.**<br>**1. ಶ್ರೀ ಎನ್.ಕುಮಾರ್, ನಿವೃತ್ತ ನ್ಯಾಯಮೂರ್ತಿಗಳು, ಕರ್ನಾಟಕ ಉಚ್ಚ ನ್ಯಾಯಾಲಯ – ಅಧ್ಯಕ್ಷರು**<br>**2. ವಿದ್ವಾನ್ ಎಚ್.ವಿ.ನಾಗರಾಜರಾವ್, ಹಿರಿಯ ಸಂಸ್ಕೃತ ವಿದ್ವಾಂಸರು ಮತ್ತು ಸಂಶೋಧಕರು – ಸದಸ್ಯರು**<br>**3. ಪ್ರೊ. ಪಿ. ವೆಂಕಟರಾಮಯ್ಯ, ವಿಶ್ರಾಂತ ಕುಲಪತಿಗಳು, ಕುವೆಂಪು ವಿಶ್ವವಿದ್ಯಾಲಯ – ಸದಸ್ಯರು**<br>**ಈ ಸಮಿತಿಯನ್ನು ರಚಿಸಿ ಮುಂದಿನ ಕ್ರಮವಹಿಸಬಹುದೆಂದು ಸಭೆಯು ಸೂಚಿಸಿತು.** |
| ವಿಷಯ 05 | ವಿಷಯ ಮತ್ತು ಟಿಪ್ಪಣಿ | **ಸಂಸ್ಕೃತ ಶಿಕ್ಷಣ ನಿರ್ದೇಶನಾಲಯದ ಸ್ನಾತಕಪೂರ್ವ ದೀಕ್ಷಾಂತ ಸಮಾರೋಹ ನಡೆಸುವ ಬಗೆಗೆ.**<br>ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಅಡಿಯಲ್ಲಿ ಸ್ಥಾಪನೆಯಾದ ಸಂಸ್ಕೃತ ಶಿಕ್ಷಣ ನಿರ್ದೇಶನಾಲಯವು ಕರ್ನಾಟಕ ರಾಜ್ಯದ ಸ್ನಾತಕಪೂರ್ವ ಶಿಕ್ಷಣವನ್ನು ನಿರ್ವಹಿಸುತ್ತಿದ್ದು, 2015–16ನೇ ಸಾಲಿನ ಪ್ರಥಮಾ, ಕಾವ್ಯ ಹಾಗೂ ಸಾಹಿತ್ಯ ಪರೀಕ್ಷೆಗಳನ್ನು ಯಶಸ್ವಿಯಾಗಿ ನಡೆಸಿ, ಫಲಿತಾಂಶವನ್ನು ಪ್ರಕಟಿಸಿದೆ. ಈ ಪರೀಕ್ಷೆಗಳಲ್ಲಿ ವೈಶಿಷ್ಟ್ಯ ಶ್ರೇಣಿಯೊಂದಿಗೆ ಉತ್ತೀರ್ಣರಾದ ವಿದ್ಯಾರ್ಥಿಗಳನ್ನು ಅಭಿನಂದಿಸಲು ಮತ್ತು 2015–16ನೇ ಸಾಲಿನಲ್ಲಿ ನಿವೃತ್ತರಾದ |

| | | |
|---|---|---|
| | | ಸಂಸ್ಕೃತ ಪಾಠಶಾಲಾ ಶಿಕ್ಷಕರನ್ನು "ಸಂಸ್ಕೃತ ಸೇವಾ ಸನ್ಮಾನ"ದೊಂದಿಗೆ ಅಭಿನಂದಸಲು ಪ್ರತಿ ವರ್ಷದಂತೆ ಈ ವರ್ಷವೂ 'ಕುವೆಂಪು ಕಲಾಕ್ಷೇತ್ರ'ದಲ್ಲಿ 'ಸ್ನಾತಕಪೂರ್ವ ದೀಕ್ಷಾಂತ ಸಮಾರೋಹ' ಕಾರ್ಯಕ್ರಮವನ್ನು ಜುಲೈ ಕೊನೆಯ ವಾರದಲ್ಲಿ ನಡೆಸಲು ತೀರ್ಮಾನಿಸಿದೆ. ಈ ಕಾರ್ಯಕ್ರಮ ನಡೆಸಲು ಅಂದಾಜು ವೆಚ್ಚದ ಪಟ್ಟಿಯನ್ನು ಸಿದ್ಧಪಡಿಸಿದ್ದು, ಪ್ರಶಾಸನ ಸಮಿತಿಯ ಅನುಮೋದನೆಗಾಗಿ ಮಂಡಿಸಿದೆ. |
| | ನಿರ್ಣಯ | **ಸ್ನಾತಕಪೂರ್ವ ದೀಕ್ಷಾಂತ ಸಮಾರೋಹ ನಡೆಸಲು ಹಾಗೂ ಸಮಾರಂಭಕ್ಕೆ ತಗಲುವ ಅಂದಾಜು ವೆಚ್ಚ ರೂ. 2.50 ಲಕ್ಷಗಳಿಗೆ ಸಭೆಯು ಅನುಮೋದನೆ ನೀಡಿತು.** |
| ವಿಷಯ 06 | ವಿಷಯ ಮತ್ತು ಟಿಪ್ಪಣಿ | **ಕಾನೂನು ಸಲಹೆಗಾರರ ಮಾಸಿಕ ಭತ್ಯೆಯನ್ನು ಹೆಚ್ಚಿಸುವ ಬಗೆಗೆ.**<br>ಶ್ರೀ ಸಿ. ವೆಂಕಟೇಶ್ ಅವರು ಸಂಸ್ಕೃತ ಶಿಕ್ಷಣ ನಿರ್ದೇಶನಾಲಯದ 'ಕಾನೂನು ಸಲಹೆಗಾರ'ರಾಗಿ ಸೇವೆಯನ್ನು ನೀಡುತ್ತಿದ್ದು, ಇವರಿಗೆ ಪ್ರಶಾಸನ ಸಮಿತಿ 23ನೇ ಸಭೆಯ ನಿರ್ಣಯದಂತೆ ರೂ. 10,000/-ಗಳನ್ನು ಮಾಸಿಕ ಗೌರವಧನವಾಗಿ ಪಾವತಿಸಲಾಗುತ್ತಿದೆ. ಶ್ರೀ ಸಿ. ವೆಂಕಟೇಶ್ ಅವರು ಮಾನ್ಯ ಕುಲಪತಿಗಳಿಗೆ ಪತ್ರವನ್ನು ನೀಡಿ, ತಮಗೆ ನೀಡುತ್ತಿರುವ ಮಾಸಿಕ ಗೌರವಧನವನ್ನು ರೂ. 15,000/-ಗಳಿಗೆ ಹೆಚ್ಚಿಸುವಂತೆ ಮನವಿ ಮಾಡಿದ್ದಾರೆ. ಲೆಕ್ಕಪರಿಶೋಧಕರ ಆಕ್ಷೇಪಣೆ ಹಿನ್ನೆಲೆಯಲ್ಲಿ ಸೂಕ್ತ ಕ್ರಮವಹಿಸಬಹುದಾಗಿದೆ. ಈ ವಿಷಯವನ್ನು ಪ್ರಶಾಸನ ಸಮಿತಿಯ ನಿರ್ಣಯಕ್ಕಾಗಿ ಮಂಡಿಸಿದೆ. |
| | ನಿರ್ಣಯ | **ಕಾನೂನು ಸಲಹೆಗಾರರ ಮಾಸಿಕ ಭತ್ಯೆಯನ್ನು ರೂ. 10,000/-ಗಳಿಂದ ರೂ. 15,000/-ಗಳಿಗೆ ಹೆಚ್ಚಿಸಲು ಸಭೆಯು ಅನುಮೋದಿಸಿತು.** |
| ವಿಷಯ 07 | ವಿಷಯ ಮತ್ತು ಟಿಪ್ಪಣಿ | **'ಮಾನಸೋಲ್ಲಾಸ' ಗ್ರಂಥವನ್ನು ಖರೀದಿಸಲು ರಿಯಾಯಿತಿ ನೀಡುವ ಬಗೆಗೆ.**<br>ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯವು 'ಶ್ರೀಸೋಮೇಶ್ವರಭೂಪತಿ ವಿರಚಿತ ಮಾನಸೋಲ್ಲಾಸ' ಗ್ರಂಥವನ್ನು ಐದು ಸಂಪುಟಗಳಲ್ಲಿ ಮೆ॥ ದರೇಸ ಪಬ್ಲಿಕೇಷನ್‌ನ ಜಂಟೀ ಪ್ರಕಾಶತ್ವದೊಂದಿಗೆ ಪ್ರಕಟಿಸಿದೆ. ಮೆ॥ ದರೇಸ ಪಬ್ಲಿಕೇಷನ್‌ನವರು ಈ ಗ್ರಂಥದ ಮಾರಾಟ ವ್ಯವಸ್ಥೆಯನ್ನು ವಹಿಸಿಕೊಂಡಿದ್ದಾರೆ. ಕೆಳದಿ ಸಂಸ್ಥಾನದ ಮೂರನೆಯ ಸೋಮೇಶ್ವರನು ರಚಿಸಿದ 'ಮಾನಸೋಲ್ಲಾಸ'ವು ಕರ್ನಾಟಕದಲ್ಲಿ ಸಿದ್ಧಗೊಂಡ ಮೊಟ್ಟಮೊದಲ ವಿಶ್ವಕೋಶವಾಗಿದೆ. ಇಂಥ ಮಹತ್ವದ ಕೃತಿಯನ್ನು ಸಂಸ್ಕೃತದ ಹಿರಿಯ ವಿದ್ವಾಂಸರು, ಇತರೆ ವಿಶ್ವವಿದ್ಯಾಲಯಗಳ ಕುಲಪತಿಗಳು, ಕುಲಸಚಿವರು ಹಾಗೂ ಉನ್ನತ ಅಧಿಕಾರಿಗಳು ಖರೀದಿಸುವ ಸಂದರ್ಭದಲ್ಲಿ ಐದು ಪ್ರತಿ(ಐದು ಸಂಪುಟಗಳ)ಗಳಿಗೆ ಮಾತ್ರ ಅವರಿಗೆ ಶೇ. 30 ರಿಯಾಯಿತಿಯನ್ನು ನೀಡಬಹುದಾಗಿದೆ. ಪ್ರಶಾಸನ ಸಮಿತಿಯ ನಿರ್ಣಯಕ್ಕಾಗಿ ಈ ವಿಷಯವನ್ನು ಮಂಡಿಸಿದೆ. |
| | ನಿರ್ಣಯ | **'ಮಾನಸೋಲ್ಲಾಸ' ಗ್ರಂಥವನ್ನು ಖರೀದಿಸಲು ರಿಯಾಯಿತಿ ನೀಡಲು ಸಭೆಯು ಒಪ್ಪಿಗೆ ನೀಡಿತು.** |
| ವಿಷಯ 08 | ವಿಷಯ ಮತ್ತು ಟಿಪ್ಪಣಿ | **ಬಿ.ಎ-ಶಾಸ್ತ್ರೀ ಹಾಗೂ ಎಂ.ಎ-ಆಚಾರ್ಯ ಪದವಿಗಳಿಗೆ ಪ್ರವೇಶಶುಲ್ಕವನ್ನು ನಿಗದಿಪಡಿಸಿರುವ ಬಗೆಗೆ.**<br>ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯವು ಅಧಿಸೂಚನೆಯನ್ನು ಹೊರಡಿಸಿ, ಘಟಕ ಹಾಗೂ ಸಂಯೋಜಿತ ಕಾಲೇಜುಗಳಲ್ಲಿ 2016-17ನೇ ಶೈಕ್ಷಣಿಕ ಸಾಲಿನ ಅವಧಿಗೆ ಬಿ.ಎ-ಶಾಸ್ತ್ರೀ ಹಾಗೂ ಎಂ.ಎ-ಆಚಾರ್ಯ ಪದವಿಗಳಿಗಾಗಿ ಅರ್ಹ ಅಭ್ಯರ್ಥಿಗಳಿಂದ ಆವೇದನಾ ಪತ್ರವನ್ನು ಆಹ್ವಾನಿಸಿದೆ. ಈ ಸಾಲಿನಿಂದ ಬಿ.ಎ-ಶಾಸ್ತ್ರೀ ಪದವಿಗೆ ರೂ. 250/- (ಪ.ಜಾ./ಪ.ಪಂ. ಅಭ್ಯರ್ಥಿಗಳಿಗೆ ರೂ. 125/-) ಹಾಗೂ ಎಂ.ಎ-ಆಚಾರ್ಯ ಪದವಿಗೆ ರೂ. 500/- (ಪ.ಜಾ./ಪ.ಪಂ. ಅಭ್ಯರ್ಥಿಗಳಿಗೆ ರೂ. 250/-) ಪ್ರವೇಶಶುಲ್ಕವನ್ನು ನಿಗದಿಪಡಿಸಲಾಗಿದ್ದು, ಪ್ರಶಾಸನ ಸಮಿತಿಯ ಅನುಮೋದನೆಗಾಗಿ ಮಂಡಿಸಿದೆ. |
| | ನಿರ್ಣಯ | **ಬಿ.ಎ-ಶಾಸ್ತ್ರೀ ಹಾಗೂ ಎಂ.ಎ-ಆಚಾರ್ಯ ಪದವಿಗಳಿಗೆ ಪ್ರವೇಶಶುಲ್ಕವನ್ನು ನಿಗದಿಪಡಿಸಿರುವುದನ್ನು ಸಭೆಯು ಒಪ್ಪಿತು, ಮತ್ತು ಮುಂದಿನ ಸಾಲಿನಿಂದ ಸಂಸ್ಕೃತ ಶಿಕ್ಷಣ ನಿರ್ದೇಶನಾಲಯದ ಪ್ರಥಮಾ ತರಗತಿಗೆ ರೂ.20/-, ಕಾವ್ಯ ತರಗತಿಗೆ ರೂ. 30/- ಮತ್ತು ಸಾಹಿತ್ಯ ತರಗತಿಗಳಿಗೆ ರೂ.40/-ಗಳನ್ನು ಪ್ರವೇಶಶುಲ್ಕವಾಗಿ ನಿಗದಿಪಡಿಸಲು ಸಭೆಯು ಸೂಚಿಸಿತು.** |
| ವಿಷಯ 09 | ವಿಷಯ ಮತ್ತು ಟಿಪ್ಪಣಿ | **ಶ್ರೀ ಎಸ್. ಕುಮಾರ್, ಕುಲಸಚಿವರು (ಆಡಳಿತ), ಸಂಸ್ಕೃತ ಸಂಶೋಧನ ಸಂಸತ್, ಮೇಲುಕೋಟೆ -ಇವರ ಪದನಾಮವನ್ನು ಬದಲಾಯಿಸುವ ಬಗೆಗೆ.**<br>ಸರ್ಕಾರದ ಆದೇಶದಂತೆ, ಮೇಲುಕೋಟೆಯ ಸಂಸ್ಕೃತ ಸಂಶೋಧನ ಸಂಸತ್‌ಅನ್ನು ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಅಧೀನಕ್ಕೆ ಒಳಪಡಿಸಲಾಗಿದೆ. ದಿನಾಂಕ: 05.04.2016ರಂದು ನಡೆದ ಸಂಸ್ಕೃತ ಸಂಶೋಧನ ಸಂಸತ್‌ನ ಆಡಳಿತ ಮಂಡಳಿಯ ಪ್ರಥಮ ಸಭೆಯ ನಿರ್ಣಯದಂತೆ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಕುಲಸಚಿವ(ಆಡಳಿತ)ರನ್ನು ಸಂಸ್ಕೃತ ಸಂಶೋಧನ ಸಂಸತ್‌ನ ಪ್ರಭಾರಿ ನಿರ್ದೇಶಕರನ್ನಾಗಿ ನೇಮಕ ಮಾಡಲಾಗಿದೆ. ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದಲ್ಲಿ ಕುಲಸಚಿವರ ಹುದ್ದೆ ಇದ್ದು, ಸಂಸ್ಕೃತ ಸಂಶೋಧನ |

| | | |
|---|---|---|
| | | ಸಂಸತ್‌ನಲ್ಲಿಯೂ ಕುಲಸಚಿವರ ಹುದ್ದೆ ಇರುವುದರಿಂದ ಹಾಗೂ ಈ ಎರಡೂ ಪದನಾಮಗಳು ಒಂದೇ ಆಗಿರುವುದರಿಂದ ಕರ್ತವ್ಯ ನಿರ್ವಹಣೆಯಲ್ಲಿ ಗೊಂದಲವೇರ್ಪಡುವ ಸಾಧ್ಯತೆಯು ಬರಬಹುದೆಂದು ಆಡಳಿತ ಮಂಡಳಿ ಸಭೆಯು ಗಮನಿಸಿದೆ. ಸಂಸ್ಕೃತ ಸಂಶೋಧನ ಸಂಸತ್‌ನಲ್ಲಿ ಪ್ರಸ್ತುತ ಶ್ರೀ ಎಸ್. ಕುಮಾರ –ಇವರು ಕುಲಸಚಿವರಾಗಿ (ಆಡಳಿತ) ಕಾರ್ಯನಿರ್ವಹಿಸುತ್ತಿದ್ದಾರೆ. ಇವರ ವೇತನಶ್ರೇಣಿಯು ರೂ. 36,300–900–39000–1050–45300–1200–52500–1350–53850 ಆಗಿದ್ದು, ಪ್ರಸ್ತುತ ರೂ. 41,100/– ಮೂಲವೇತನವನ್ನು ಪಡೆಯುತ್ತಿದ್ದಾರೆ. ಸದರಿಯವರ ಸುದೀರ್ಘ ಸೇವೆ, ಅನುಭವ ಹಾಗೂ ಅವರು ಅಲಂಕರಿಸಲಾಗಿರುವ ಹುದ್ದೆಯನ್ನು ಗಮನದಲ್ಲಿಟ್ಟುಕೊಂಡು ವಿಶ್ವವಿದ್ಯಾಲಯದಲ್ಲಿನ ಸದರಿ ವೇತನಶ್ರೇಣಿಗೆ ಬರಬಹುದಾದ ಹುದ್ದೆಯ ಸೂಕ್ತ ಪದನಾಮವನ್ನು ಇವರಿಗೆ ಅಳವಡಿಸಲು ಆಡಳಿತ ಮಂಡಳಿ ಸಭೆಯು ಮಾನ್ಯ ಕುಲಪತಿಗಳಿಗೆ ಸಂಪೂರ್ಣ ಅಧಿಕಾರ ನೀಡಿತು. ಈ ಹಿನ್ನೆಲೆಯಲ್ಲಿ, ಶ್ರೀ ಎಸ್. ಕುಮಾರ, ಕುಲಸಚಿವರು (ಆಡಳಿತ) ಇವರ ಪದನಾಮವನ್ನು ಅವರ ವೇತನಶ್ರೇಣಿಗೆ ಸಮನಾಗಿರುವ 'ಉಪನಿರ್ದೇಶಕ' ಎಂದು ಬದಲಾಯಿಸಲು ಪ್ರಶಾಸನ ಸಮಿತಿಯ ನಿರ್ಣಯಕ್ಕಾಗಿ ಮಂಡಿಸಿದೆ. |
| | ನಿರ್ಣಯ | **ಶ್ರೀ ಎಸ್. ಕುಮಾರ್, ಕುಲಸಚಿವರು (ಆಡಳಿತ), ಸಂಸ್ಕೃತ ಸಂಶೋಧನ ಸಂಸತ್, ಮೇಲುಕೋಟೆ –ಇವರ ಪದನಾಮವನ್ನು ಅವರ ವೇತನಶ್ರೇಣಿಗೆ ಸಮನಾಗಿರುವ 'ಉಪನಿರ್ದೇಶಕ' ಎಂದು ಬದಲಾಯಿಸಲು ಸರ್ಕಾರಕ್ಕೆ ಪತ್ರ ಬರೆದು ಒಪ್ಪಿಗೆ ಪಡೆದ ನಂತರ ಕ್ರಮವಹಿಸಲು ಸಭೆಯು ಸೂಚಿಸಿತು.** |
| ವಿಷಯ 10 | ವಿಷಯ ಮತ್ತು ಟಿಪ್ಪಣಿ | **ಸರ್ಕಾರದ ನಿಯಮಾನುಸಾರ ಮೇಲುಕೋಟೆಯ ಸಂಸ್ಕೃತ ಸಂಶೋಧನ ಸಂಸತ್‌ನ ಸಿಬ್ಬಂದಿಗಳಿಗೆ ಪ್ರಸೂತಿ ರಜೆ ಮತ್ತು ಗಳಿಕೆ ರಜೆಯ ಗರಿಷ್ಠ ಮಿತಿಯನ್ನು ನಿಗದಿಪಡಿಸುವ ಬಗೆಗೆ.**<br>ಮೇಲುಕೋಟೆಯ ಸಂಸ್ಕೃತ ಸಂಶೋಧನ ಸಂಸತ್‌ನ್ನು 1976ರಲ್ಲಿ ರಾಜ್ಯ ಸರ್ಕಾರವು ಸ್ಥಾಪಿಸಿರುತ್ತದೆ. ಸದರಿ ಸಂಸ್ಥೆಯ 'ಸೇವಾ ನಿಯಮ–1987'ರಂತೆ ಅರ್ಜಿತ ರಜೆಯ ಗರಿಷ್ಠ ಮಿತಿಯನ್ನು 180 ದಿನಗಳಿಗೂ ಹಾಗೂ ಹೆರಿಗೆ ರಜೆಯ ಗರಿಷ್ಠ ಮಿತಿಯನ್ನು 90 ದಿನಗಳವರೆವಿಗೆ ವಿಸ್ತರಿಸಿರುತ್ತದೆ. ಕರ್ನಾಟಕ ಸರ್ಕಾರವು 11.06.2007ರಲ್ಲಿ ಆದೇಶ ಹೊರಡಿಸಿದ್ದು ಪ್ರಥಮ ಬಾರಿಯಾಗಿ ಯೋಜನೇತರ ವಿಭಾಗದ ಮೂಲಕ ನೌಕರರುಗಳಿಗೆ ಮೂಲವೇತನ, ತುಟ್ಟಿಭತ್ಯೆ, ಮನೆಬಾಡಿಗೆಭತ್ಯೆ, ನಗರ ಪರಿಹಾರಭತ್ಯೆ ಮತ್ತು ಪಿಂಚಣಿ ವಂತಿಕೆ ವೆಚ್ಚಗಳನ್ನು ಭರಿಸುವ ಸಲುವಾಗಿ ಆದೇಶ ಹೊರಡಿಸಿರುತ್ತದೆ. ಈ ಸಂಬಂಧ ಸಂಸ್ಥೆಯ 'ಸೇವಾನಿಯಮ – 1987'ರ ನಿಯಮವು 2012ರಲ್ಲಿ ತಿದ್ದುಪಡಿಗೊಂಡಿದ್ದು, ಸರ್ಕಾರದ ಕೆ.ಸಿ.ಎಸ್.ಆರ್. ನಿಯಮ ಹಾಗೂ ಸರ್ಕಾರವು ಕಾಲಕಾಲದಲ್ಲಿ ಹೊರಡಿಸಲಾಗುವ ಆದೇಶದಂತೆ ಈ ಸಂಸ್ಥೆಯ ಎಲ್ಲಾ ಯೋಜನೇತರ ನೌಕರರುಗಳಿಗೂ ವಿಸ್ತರಿಸಲು ನಿಯಮಾವಳಿಯಲ್ಲಿ ಅವಕಾಶ ಮಾಡಿರುತ್ತದೆ. ಸರ್ಕಾರವು ರಾಜ್ಯ ಸರ್ಕಾರಿ ನೌಕರರುಗಳಿಗೆ ಪರಿಷ್ಕೃತ 6ನೇ ವೇತನ ಸೌಲಭ್ಯ ಹಾಗೂ ಗಳಿಕೆ ರಜೆಯ ನಗದೀಕರಣ ಸೇರಿ ಆದೇಶವನ್ನು ದಿನಾಂಕ: 25.03.2015ರಲ್ಲಿ ಹೊರಡಿಸಿರುತ್ತದೆ. ಆ ನಂತರ ಕರ್ನಾಟಕ ಸರ್ಕಾರದ ಆದೇಶ ಸಂಖ್ಯೆ: ಇಡಿ 98 ಯುಆರ್‌ಸಿ 2009 (ಭಾಗ–4), ದಿನಾಂಕ: 15.12.2015ರಲ್ಲಿ ಸದರಿ ಸಂಸ್ಥೆಯ ಆಡಳಿತ ನಿರ್ವಹಣೆ/ ನಿಯಂತ್ರಣದೊಡನೆ ಅನುದಾನ ಸಹಿತವಾಗಿ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಅಧೀನಕ್ಕೆ ಒಳಪಡಿಸಿ ಆದೇಶ ನೀಡಿರುತ್ತದೆ. ಈ ಆದೇಶದಂತೆ ವಿಶ್ವವಿದ್ಯಾಲಯವು ದಿನಾಂಕ: 21.12.2015ರಲ್ಲಿ ಅಧಿಸೂಚನೆ ಹೊರಡಿಸಲಾಗಿದ್ದಂತೆ ಸದರಿ ಸಂಸ್ಥೆಯು 05.02.2016ರಂದು ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಅಧೀನಕ್ಕೆ ಒಳಪಟ್ಟಿರುತ್ತದೆ.<br>ರಾಜ್ಯ ಸರ್ಕಾರವು ಆದೇಶ ಸಂಖ್ಯೆ: ಆಇ 5 ಸೇನಿಸೇ 2012, ಬೆಂಗಳೂರು; ದಿನಾಂಕ: 14.06.2012ರ ಅನ್ವಯ ಗಳಿಕೆ ರಜೆಯ ಗರಿಷ್ಠ ಮಿತಿಯನ್ನು 300 ದಿನಗಳವರೆವಿಗೆ ಹಾಗೂ ಆದೇಶ ಸಂಖ್ಯೆ: ಆಇ 4 ಸೇನಿಸೇ 2012, ಬೆಂಗಳೂರು; ದಿನಾಂಕ: 14.06.2012ರ ಅನ್ವಯ ಹೆರಿಗೆ ರಜೆಯ ಗರಿಷ್ಠ ಮಿತಿಯನ್ನು 180 ದಿನಗಳಿಗೂ ಹೆಚ್ಚಿಸಿ ಆದೇಶಿಸಿದೆ. ಹಾಗೆಯೇ ಸರ್ಕಾರಿ ನಿಯಮ Section IV-A ಅನ್ವಯ ಪಿತೃತ್ವ ರಜೆಯನ್ನು 15 ದಿನಗಳಿಗೆ ನಿಗದಿಪಡಿಸಿರುತ್ತದೆ. ಸರ್ಕಾರದ ಆದೇಶಗಳನ್ವಯ ಸಂಸ್ಕೃತ ಸಂಶೋಧನ ಸಂಸತ್‌ನ ಯೋಜನೇತರ ವಿಭಾಗದ ನೌಕರರುಗಳಿಗೆ 2016–17ನೇ ಸಾಲಿನಿಂದ ಜಾರಿಗೆ ಬರುವಂತೆ ಗಳಿಕೆ ರಜೆಯ ಗರಿಷ್ಠ ಮಿತಿಯನ್ನು 180 ದಿನಗಳಿಂದ 300 ದಿನಗಳವರೆಗೆ ಮತ್ತು ಹೆರಿಗೆ ರಜೆಯ ಗರಿಷ್ಠ ಮಿತಿಯನ್ನು 90 ದಿನಗಳಿಂದ 180 ದಿನಗಳವರೆಗೂ ಹೆಚ್ಚಿಸಲು ಹಾಗೂ ಪಿತೃತ್ವ ರಜೆಯ ಗರಿಷ್ಠ ಮಿತಿಯನ್ನು 15 ದಿನಗಳಿಗೆ ವಿಸ್ತರಿಸಿ ತಿದ್ದುಪಡಿ ಆದೇಶ ಹೊರಡಿಸಬೇಕಾಗಿದ್ದು, ಪ್ರಶಾಸನ ಸಮಿತಿಯ ಅನುಮೋದನೆಗಾಗಿ ಈ ವಿಷಯವನ್ನು ಮಂಡಿಸಿದೆ. |
| | ನಿರ್ಣಯ | **ಈ ಬಗ್ಗೆ ನಿಯಮಾನುಸಾರ ಕ್ರಮವಹಿಸಲು ಸಭೆಯು ಸೂಚಿಸಿತು.** |
| ವಿಷಯ 11 | ವಿಷಯ ಮತ್ತು ಟಿಪ್ಪಣಿ | **ಬೋಧಕ–ಬೋಧಕೇತರ ಸಿಬ್ಬಂದಿಗಳ ಕಾರ್ಯಪ್ರಗತಿ ವರದಿಯನ್ನು ಮಂಡಿಸುವ ಬಗೆಗೆ.**<br>ದಿನಾಂಕ: 16.03.2016ರಂದು ನಡೆದ ಪ್ರಶಾಸನ ಸಮಿತಿ 32ನೇ ಸಭೆಯು ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಬೋಧಕ–ಬೋಧಕೇತರ ಸಿಬ್ಬಂದಿಗಳು ನೇಮಕಗೊಂಡಾಗಿನಿಂದ |

| | | |
|---|---|---|
| | | ಈವರೆಗಿನ ಕಾರ್ಯಪ್ರಗತಿ ವರದಿಯನ್ನು ಮುಂದಿನ ಸಭೆಯಲ್ಲಿ ಮಂಡಿಸುವಂತೆ ಸೂಚಿಸಿತ್ತು. ಅದರಂತೆ, ವಿಶ್ವವಿದ್ಯಾಲಯದ ಬೋಧಕ–ಬೋಧಕೇತರ ಸಿಬ್ಬಂದಿಗಳ ಕಾರ್ಯಪ್ರಗತಿ ವರದಿಯನ್ನು ಸಭೆಯ ಅವಗಾಹನೆಗಾಗಿ ಮಂಡಿಸಿದೆ. |
| | ನಿರ್ಣಯ | **ವಿಶ್ವವಿದ್ಯಾಲಯದ ಬೋಧಕ–ಬೋಧಕೇತರ ಸಿಬ್ಬಂದಿಗಳ ಕಾರ್ಯಪ್ರಗತಿ ವರದಿಯನ್ನು ಮಂಡಿಸಿರುವುದನ್ನು ಸಭೆಯು ಪರಿಶೀಲಿಸಿತು. ಪ್ರತಿ ವರ್ಷ ಎಲ್ಲ ಬೋಧಕ ಸಿಬ್ಬಂದಿ, ಸಂಶೋಧನ ಸಹಾಯಕರು ಹಾಗೂ ಬೋಧಕೇತರ ಸಿಬ್ಬಂದಿ ಕಾರ್ಯಪ್ರಗತಿ ವರದಿಯನ್ನು ಮಂಡಿಸಲು ಸೂಚಿಸಿತು. (01.04.2016ರಿಂದ 31.03.2017ರವರೆಗೆ)** |
| ವಿಷಯ 12 | ವಿಷಯ ಮತ್ತು ಟಿಪ್ಪಣಿ | **ಅನಧಿಕೃತವಾಗಿ ಗೈರುಹಾಜರಾಗಿರುವ ನೌಕರರ ವಿರುದ್ಧ ಶಿಸ್ತುಕ್ರಮ ಜರುಗಿಸುವ ಬಗೆಗೆ.**<br>ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ 'ಗ್ರೂಪ್ ಡಿ' (ಕಾವಲುಗಾರ)ರಾಗಿ ನೇಮಕಗೊಂಡಿರುವ ಶ್ರೀ ಮೊಹಮ್ಮದ್ ಮುದಾಸಿರ್ ಇವರು ಸೇವೆಗೆ ಸೇರಿದ ದಿನಾಂಕ:09.09.2015 ರಿಂದ ದಿನಾಂಕ 1.04.2016 ರವರೆಗೆ ಯಾವುದೇ ಪೂರ್ವಾನುಮತಿಯನ್ನು ಪಡೆಯದೆ, ಒಟ್ಟು 57 ದಿನಗಳು ಅನಧಿಕೃತವಾಗಿ ಗೈರುಹಾಜರಿರಾಗುರುತ್ತಾರೆ. ವಿಶ್ವವಿದ್ಯಾಲಯದ ಪತ್ರ ಸಂಖ್ಯೆ: ಕಸಂವಿ/ಬೋಧಕೇತರ/ಸಿ.ಕಾ04/2015–16, ದಿನಾಂಕ: 18.04.2016 ರಲ್ಲಿ ಕಾರಣ ಕೇಳಿ ನೋಟೀಸ್ ನೀಡಲಾಗಿತ್ತು ಇದಕ್ಕೆ ಸದರಿ ಸಿಬ್ಬಂದಿಯು ಚಿಕನ್ ಗೂನ್ಯ ಕಾಯಿಲೆಯಿಂದ ಆಸ್ಪತ್ರೆಗೆ ಸೇರಿ ಚಿಕಿತ್ಸೆ ಪಡೆಯುತ್ತಿದ್ದೇನೆಂದು ವೈದ್ಯಕೀಯ ಪ್ರಮಾಣಪತ್ರ ಸಲ್ಲಿಸಿರುತ್ತಾರೆ. ಇವರು ಸೇವೆಗೆ ಸೇರಿದ ದಿನಾಂಕ: 09.09.2015 ರಿಂದ ದಿನಾಂಕ 1.04.2016 ರವರೆಗೆ 57 ದಿನಗಳು ಮತ್ತು ಇಲ್ಲಿಯವರೆಗೂ ಅಂದರೆ ದಿನಾಂಕ: 1.04.2016 ರಿಂದ ದಿನಾಂಕ: 24.06.2016 ರವರೆಗೆ 85 ದಿನಗಳು ಒಟ್ಟು 142 ದಿನಗಳು ಅನಧಿಕೃತವಾಗಿ ಗೈರುಹಾಜರಿಯಾಗಿರುತ್ತಾರೆ. ಅನಧಿಕೃತವಾಗಿ ಗೈರುಹಾಜರಾಗದಂತೆ ಇವರಿಗೆ ಈಗಾಗಲೇ ಹಲವು ಬಾರಿ ಸೂಚನೆ ನೀಡಲಾಗಿದೆ. ಇವರ ಖಾಯಂಪೂರ್ವ ಸೇವಾವಧಿಯು ಇನ್ನೂ ಘೋಷಣೆಯಾಗದ ಹಿನ್ನೆಲೆಯಲ್ಲಿ, ಇವರ ವಿರುದ್ಧ ಕರ್ನಾಟಕ ನಾಗರಿಕ ಸೇವಾ ನಿಯಮ(ಕೆ.ಸಿ.ಎಸ್.ಆರ್.)ಗಳನ್ವಯ ಸೂಕ್ತ ಕ್ರಮ ಜರುಗಿಸಬಹುದಾಗಿದ್ದು, ಈ ವಿಷಯವನ್ನು ಸಭೆಯ ಮುಂದೆ ಮಂಡಿಸಿದೆ. |
| | ನಿರ್ಣಯ | **ಕೆ.ಸಿ.ಎಸ್.ಆರ್ ನಿಯಮಗಳನ್ವಯ ಸದರಿ ಸಿಬ್ಬಂದಿಗೆ ಎಚ್ಚರಿಕೆ ನೋಟೀಸ್ ನೀಡಿ, ಅನಧಿಕೃತ ಗೈರುಹಾಜರಿಯ ಸೇವಾವಧಿಯನ್ನು ಕಡಿತಗೊಳಿಸಿ ಸೇವಾ ಪುಸ್ತಕದಲ್ಲಿ ದಾಖಲಿಸಲು ಸಭೆಯು ಸೂಚಿಸಿತು.** |
| ವಿಷಯ 13 | ವಿಷಯ ಮತ್ತು ಟಿಪ್ಪಣಿ | **ಸಂಶೋಧನಾ ಕೇಂದ್ರಗಳಿಗೆ ಸರ್ಕಾರದಿಂದ ಬಿಡುಗಡೆಯಾಗಿರುವ ಅನುದಾನದ ಸದ್ಬಳಕೆಯ ಬಗೆಗೆ.**<br>ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಮಾನ್ಯತೆಯನ್ನು ಹೊಂದಿರುವ ಸಂಶೋಧನಾ ಕೇಂದ್ರಗಳಿಗೆ ಕರ್ನಾಟಕ ಸರ್ಕಾರವು ಅನುದಾನವನ್ನು ನೀಡುತ್ತಿದೆ. ಈ ಸಾಲಿನ ಅನುದಾನವನ್ನು ನೀಡುವ ಸಲುವಾಗಿ ಸಂಶೋಧನಾ ಕೇಂದ್ರಗಳಿಗೆ ಈ ಹಿಂದೆ ಸರ್ಕಾರವು ನೀಡಿದ್ದ ಅನುದಾನದ ಸದ್ಬಳಕೆಯ ಬಗ್ಗೆ ಮತ್ತು ಕಾರ್ಯಪ್ರಗತಿಯನ್ನು ಪರಿಶೀಲಿಸಿ, ವರದಿಯನ್ನು ಸಲ್ಲಿಸುವಂತೆ ಸರ್ಕಾರವು ಸೂಚಿಸಿದೆ. ಈ ಹಿನ್ನೆಲೆಯಲ್ಲಿ ಕುಲಸಚಿವರು ಮತ್ತು ಹಣಕಾಸು ಅಧಿಕಾರಿಗಳು ಸಂಶೋಧನಾ ಕೇಂದ್ರಗಳಿಗೆ ಭೇಟಿ ನೀಡಿ ಅನುದಾನದ ಸದ್ಬಳಕೆ ಮತ್ತು ಕಾರ್ಯಪ್ರಗತಿಯನ್ನು ಪರಿಶೀಲಿಸಿ, ಸರ್ಕಾರಕ್ಕೆ ವರದಿ ಸಲ್ಲಿಸಲು ಪ್ರಶಾಸನ ಸಮಿತಿಯ ಅನುಮೋದನೆಗಾಗಿ ಮಂಡಿಸಿದೆ. |
| | ನಿರ್ಣಯ | **ಸಂಶೋಧನಾ ಕೇಂದ್ರಗಳಿಗೆ ಸರ್ಕಾರದಿಂದ ಬಿಡುಗಡೆಯಾಗಿರುವ ಅನುದಾನದ ಸದ್ಬಳಕೆ ಮತ್ತು ಆಯಾ ಸಂಶೋಧನ ಕೇಂದ್ರಗಳ ಕಾರ್ಯಪ್ರಗತಿಯನ್ನು ಪರಿಶೀಲಿಸಲು ಕುಲಸಚಿವರು ಸದರಿ ಸಂಸ್ಥೆಗಳಿಗೆ ಭೇಟಿ ನೀಡಿ ಪರಿಶೀಲಿಸುತ್ತಿರುವ ಕ್ರಮಕ್ಕೆ ಸಭೆಯು ಪ್ರಶಂಸೆ ವ್ಯಕ್ತಪಡಿಸಿ, ಕುಲಸಚಿವರು ಮತ್ತು ಹಣಕಾಸು ಅಧಿಕಾರಗಳು ಭೇಟಿ ನೀಡಿ ಪರಿಶೀಲಿಸಿದ ನಂತರ ಸರ್ಕಾರಕ್ಕೆ ವರದಿ ಸಲ್ಲಿಸಲು ಒಪ್ಪಿಗೆ ಸೂಚಿಸಿತು.** |
| ವಿಷಯ 14 | ವಿಷಯ ಮತ್ತು ಟಿಪ್ಪಣಿ | **ಸಂಸ್ಕೃತ ಪಾಠಶಾಲೆಗಳಿಗೆ ಭೇಟಿ ನೀಡಿ ಪರಿಶೀಲನೆ ನಡೆಸುವ ಬಗೆಗೆ.**<br>ಸಂಸ್ಕೃತ ಶಿಕ್ಷಣ ನಿರ್ದೇಶನಾಲಯದ ಅಡಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಪಾಠಶಾಲೆಗಳ ಬಗೆಗೆ ದೂರುಗಳು ಬರುತ್ತಿರುವ ಹಿನ್ನೆಲೆಯಲ್ಲಿ, ಉನ್ನತ ಶಿಕ್ಷಣ ಇಲಾಖೆಯ ಅಪರ ಮುಖ್ಯ ಕಾರ್ಯದರ್ಶಿಗಳು ಪತ್ರವನ್ನು ಬರೆದು, ಈ ಬಗ್ಗೆ ಕೂಲಂಕಷವಾಗಿ ಪರಿಶೀಲಿಸಿ ವರದಿಯನ್ನು ಸಲ್ಲಿಸುವಂತೆ ಸೂಚಿಸಿದ್ದಾರೆ. ಈ ಹಿನ್ನೆಲೆಯಲ್ಲಿ ಕುಲಸಚಿವರು ಹಾಗೂ ಸಂಸ್ಕೃತ ಶಿಕ್ಷಣ ನಿರ್ದೇಶನಾಲಯದ ನಿರ್ದೇಶಕರು ಸಂಸ್ಕೃತ ಪಾಠಶಾಲೆಗಳನ್ನು ಪರಿಶೀಲಿಸಿ, ಸತ್ಯಸಾಧ್ಯತಾ ವರದಿಯನ್ನು ಸಿದ್ಧಪಡಿಸಲು ಪಾಠಶಾಲೆಗಳಿಗೆ ಭೇಟಿ ನೀಡಬೇಕಾಗಿದೆ. ಪ್ರಶಾಸನ ಸಮಿತಿಯ ಅನುಮತಿಗಾಗಿ ಈ ವಿಷಯವನ್ನು ಮಂಡಿಸಿದೆ. |
| | ನಿರ್ಣಯ | **ಸಂಸ್ಕೃತ ಶಿಕ್ಷಣ ನಿರ್ದೇಶನಾಲಯದ ಪಾಠಶಾಲೆಗಳಿಗೆ ಜುಲೈ ತಿಂಗಳ ನಂತರ, 1. ಸಿಂಡಿಕೇಟ್ ಸದಸ್ಯರು, 2. ಕುಲಸಚಿವರು, 3. ನಿರ್ದೇಶಕರು, ಇವರನ್ನು ಒಳಗೊಂಡ ಸಮಿತಿಯು ಸಂಸ್ಕೃತ ಪಾಠಶಾಲೆಗಳಿಗೆ ಭೇಟಿ ನೀಡಿ ಪರಿಶೀಲಿಸಲು ಸಭೆಯು ಸೂಚಿಸಿತು.** |

| | | |
|---|---|---|
| ವಿಷಯ 15 | ವಿಷಯ ಮತ್ತು ಟಿಪ್ಪಣಿ | **ಶ್ರೀ ರಾಮಾನುಜಾಚಾರ್ಯರ 1000ನೇ ವರ್ಷಾಚರಣೆಯನ್ನು ಇಡೀ ವರ್ಷ ಏರ್ಪಡಿಸುವ ಬಗೆಗೆ.**<br>ಸರಿಸುಮಾರು ಸಾವಿರ ವರ್ಷಗಳ ಹಿಂದೆ (ಕ್ರಿ.ಶ. 1017–1137) ಶ್ರೀಮದ್ ರಾಮಾನುಜಾಚಾರ್ಯರು ಸಾಮಾಜಿಕ ಪಿಡುಗುಗಳಾಗಿದ್ದ ಜಾತಿ, ವರ್ಣ, ವೃತ್ತಿ ತಾರತಮ್ಯಗಳನ್ನು ಅಳಿಸಿ ಆಧ್ಯಾತ್ಮಿಕ, ಧಾರ್ಮಿಕ ಭಕ್ತಿಮಾರ್ಗಗಳ ಮೂಲಕ ವ್ಯಕ್ತಿ ಮತ್ತು ಸಮಾಜದ ಅಭಿವೃದ್ಧಿಯನ್ನು ಜೊತೆಜೊತೆಗೆ ಸಾಧಿಸುವ ಉತ್ತಮ ಚಿಂತನೆಯನ್ನು ತಮ್ಮ ಜೀವನಮಾರ್ಗದ ಮೂಲಕ ಸಮಾಜಕ್ಕೆ ಕೊಡುಗೆಯಾಗಿ ನೀಡಿದರು. ಈ ಉತ್ಕೃಷ್ಟ ಸಾಧನೆಯ ಮಾರ್ಗದಲ್ಲಿ ಅವರು ಎದುರಿಸಿದ ವಿರೋಧಗಳು, ವೈಪರೀತ್ಯಗಳು ಹಾಗೂ ಅವುಗಳನ್ನು ಅವರು ಯಶಸ್ವಿಯಾಗಿ ನಿಭಾಯಿಸಿದ ರೀತಿ ಮತ್ತು ಸಮಾಜಮುಖಿಯಾದ ಅವರ ನಿಜವಾದ ಸಾಮಾಜಿಕ ಕಳಕಳಿ – ಈ ಎಲ್ಲ ವಿಷಯಗಳನ್ನು ನಾವು ಈಗಿನ ಆಧುನಿಕ ಸಮಾಜಕ್ಕೆ ತಿಳಿಯಪಡಿಸಬೇಕಿದೆ. ಈ ಹಿನ್ನೆಲೆಯಲ್ಲಿ, ಮೇಲುಕೋಟೆಯ ಸಂಸ್ಕೃತ ಸಂಶೋಧನ ಸಂಸತ್ತು, ಈ ವರ್ಷವನ್ನು ಶ್ರೀಮದ್ ರಾಮಾನುಜಾಚಾರ್ಯರ ಸಹಸ್ರಮಾನೋತ್ಸವ ವರ್ಷವನ್ನಾಗಿ ಒಂದು ವರ್ಷವಿಡೀ ಆಚರಿಸಲು ನಿರ್ಣಯಿಸಿದೆ. ವಿಚಾರಗೋಷ್ಠಿ, ಕಾರ್ಯಾಗಾರ, ಸಮ್ಮೇಳನ, ಪ್ರತಿ ತಿಂಗಳ ಉಪನ್ಯಾಸ, ಕಾಲೇಜು ವಿದ್ಯಾರ್ಥಿಗಳಿಗಾಗಿ ರಾಮಾನುಜಾಚಾರ್ಯರ ಜೀವನ ಹಾಗೂ ತತ್ತ್ವಗಳಿಗೆ ಸಂಬಂಧಿಸಿದಂತೆ ಭಾಷಣ ಸ್ಪರ್ಧೆಗಳು – ಇತ್ಯಾದಿಗಳನ್ನು ಆಯೋಜಿಸಲಾಗುತ್ತದೆ. ಇವಿಷ್ಟೇ ಅಲ್ಲದೆ, ಶ್ರೀಮದ್ ರಾಮಾನುಜಾಚಾರ್ಯರ ಬಾಲ್ಯದಿಂದ ಅಂತ್ಯಕಾಲದವರೆಗಿನ ನೂರಕ್ಕೂ ಹೆಚ್ಚು ಚಿತ್ರಗಳು ಮತ್ತು ಅನೇಕ ತಾಳೆಗರಿ ಹಸ್ತಪ್ರತಿಗಳ ಪ್ರದರ್ಶನವನ್ನೂ ಕೂಡ ಏರ್ಪಡಿಸಲಾಗುತ್ತದೆ. ವಿವಿಧ ಶಾಲಾ–ಕಾಲೇಜುಗಳ ವಿದ್ಯಾರ್ಥಿಗಳು ಇವುಗಳನ್ನು ವೀಕ್ಷಿಸಲು ವ್ಯವಸ್ಥೆ ಮಾಡಲಾಗುತ್ತದೆ. ಶ್ರೀಮದ್ ರಾಮಾನುಜಾಚಾರ್ಯರ ಬಗೆಗೆ ಸಾಕ್ಷ್ಯಚಿತ್ರವನ್ನು ಸಿದ್ಧಪಡಿಸಿ, ಪ್ರಚುರಪಡಿಸುವ ಯೋಜನೆಯನ್ನು ಹಮ್ಮಿಕೊಳ್ಳಲು ಮತ್ತು ನೂತನ ಗ್ರಂಥಾಲಯವನ್ನು ನಿರ್ಮಿಸಿ 'ಶ್ರೀ ರಾಮಾನುಜಾಚಾರ್ಯ ಗ್ರಂಥಾಲಯ'ವನ್ನಾಗಿ ಹೆಸರಿಸಲು 'ಆಡಳಿತ ಮಂಡಳಿ' ಪ್ರಥಮ ಸಭೆಯು ನಿರ್ಣಯಿಸಿದೆ. ಈ ಹಿನ್ನೆಲೆಯಲ್ಲಿ, ಮುಂದಿನ ಕ್ರಮವಹಿಸಲು ಪ್ರಶಾಸನ ಸಮಿತಿಯ ಅನುಮತಿಗಾಗಿ ಮಂಡಿಸಿದೆ. |
| | ನಿರ್ಣಯ | **ಶ್ರೀ ರಾಮಾನುಜಾಚಾರ್ಯರ 1000ನೇ ವರ್ಷಾಚರಣೆ ನಡೆಸಲು ಸಭೆಯು ಸಮ್ಮತಿ ಸೂಚಿಸಿತು.** |
| ವಿಷಯ 16 | ವಿಷಯ ಮತ್ತು ಟಿಪ್ಪಣಿ | **ಸಂಸ್ಕೃತ ಸಂಶೋಧನ ಸಂಸತ್‌ನ 'ಆಡಳಿತ ಮಂಡಳಿ' ಪ್ರಥಮ ಸಭೆ ಮತ್ತು 'ಪ್ರಸಾರಾಂಗ ಸಲಹಾ ಸಮಿತಿ' ಸಭೆಯ ನಡಾವಳಿಗಳನ್ನು ಅನುಮೋದಿಸುವ ಬಗೆಗೆ.**<br>ಸಂಸ್ಕೃತ ಸಂಶೋಧನ ಸಂಸತ್‌ನ 'ಆಡಳಿತ ಮಂಡಳಿ' ಪ್ರಥಮ ಸಭೆಯು ದಿನಾಂಕ: 05.04.2016ರಂದು ಹಾಗೂ 'ಪ್ರಸಾರಾಂಗ ಸಲಹಾ ಸಮಿತಿ' ಮೊದಲನೇ ಸಭೆಯು ದಿನಾಂಕ: 25.05.2016ರಂದು ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ ನಡೆಯಿತು. ಈ ಸಭೆಗಳಲ್ಲಿ ಹಲವು ವಿಷಯಗಳು ಪ್ರಸ್ತಾಪಗೊಂಡು ಅನುಮೋದನೆಗೊಂಡವು. ಈ ಸಭೆಗಳ ನಡಾವಳಿಗಳನ್ನು ಪ್ರಶಾಸನ ಸಮಿತಿಯ ಅನುಮೋದನೆಗಾಗಿ ಮಂಡಿಸಿದೆ. |
| | ನಿರ್ಣಯ | **ಸಂಸ್ಕೃತ ಸಂಶೋಧನ ಸಂಸತ್‌ನ 'ಆಡಳಿತ ಮಂಡಳಿ' ಪ್ರಥಮ ಸಭೆ ಮತ್ತು 'ಪ್ರಸಾರಾಂಗ ಸಲಹಾ ಸಮಿತಿ' ಸಭೆಯ ನಡಾವಳಿಗಳನ್ನು ಸಭೆಯು ಅನುಮೋದಿಸಿತು.** |
| ವಿಷಯ 17 | ವಿಷಯ ಮತ್ತು ಟಿಪ್ಪಣಿ | **ಸಂಸ್ಕೃತ ಸಂಶೋಧನ ಸಂಸತ್ತಿನ ಪ್ರಸಾರಾಂಗ ಮತ್ತು ಮುದ್ರಣಾಲಯವನ್ನು ವಿಸ್ತರಿಸುವ ಬಗ್ಗೆ**<br>ಮೇಲುಕೋಟೆಯ ಸಂಸ್ಕೃತ ಸಂಶೋಧನ ಸಂಸತ್ತಿನ ಪ್ರಸಾರಾಂಗ ಮತ್ತು ಮುದ್ರಣಾಲಯವನ್ನು ವಿಸ್ತರಿಸುವ ದೃಷ್ಟಿಯಿಂದ 'ಆಡಳಿತ ಮಂಡಳಿ ಸಭೆ' ಮತ್ತು 'ಪ್ರಸಾರಾಂಗ ಸಲಹಾ ಸಮಿತಿ'ಯ ಸಭೆಯು ನಿರ್ಣಯ ಕೈಗೊಂಡಿದೆ. ಅದರಂತೆ, ಪ್ರಸಾರಾಂಗ ಮತ್ತು ಮುದ್ರಣಾಲಯದ ವಿಸ್ತಾರಕ್ಕಾಗಿ ಹೆಚ್ಚಿನ ಸಿಬ್ಬಂದಿಯ ಅವಶ್ಯಕತೆ ಇರುತ್ತದೆ. ಸದರಿ ಸಂಸ್ಥೆಯ ಪ್ರಸಾರಾಂಗ ವಿಭಾಗದಲ್ಲಿ ಖಾಲಿ ಇರುವ 6 ಹುದ್ದೆಗಳನ್ನು ಸರ್ಕಾರದ ಮೀಸಲಾತಿ ಮತ್ತು ಹೈದರಾಬಾದ್ ಕರ್ನಾಟಕದ 371(ಜೆ) ಅನುಸಾರ ನಿಯಮಾನುಸಾರ ತುಂಬಿಕೊಳ್ಳಬೇಕಾಗಿದ್ದು, ಈ ಸಂಬಂಧ ಮುಂದಿನ ಕ್ರಮಗಳನ್ನು ವಹಿಸಲು ಪ್ರಶಾಸನ ಸಮಿತಿಯ ಅನುಮತಿಗಾಗಿ ಮಂಡಿಸಿದೆ. |
| | ನಿರ್ಣಯ | **ಸಂಸ್ಕೃತ ಸಂಶೋಧನ ಸಂಸತ್ತಿನ ಪ್ರಸಾರಾಂಗ ಮತ್ತು ಮುದ್ರಣಾಲಯವನ್ನು ವಿಸ್ತರಿಸಲು ಹಾಗೂ ಸದರಿ ಹುದ್ದೆಗಳನ್ನು ತುಂಬಿಕೊಳ್ಳಲು ಸಭೆಯು ಅನುಮೋದನೆ ನೀಡಿತು.** |
| ವಿಷಯ 18 | ವಿಷಯ ಮತ್ತು ಟಿಪ್ಪಣಿ | **'ಪಾಲಿ ಇನ್ಸ್ಟಿಟ್ಯೂಟ್' ಸಂಸ್ಥೆಯೊಂದಿಗೆ ಒಡಂಬಡಿಕೆ ಮಾಡಿಕೊಳ್ಳುವ ಬಗ್ಗೆ**<br>ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯವು ಸಂಶೋಧನಪ್ರಧಾನವಾದ ವಿಶ್ವವಿದ್ಯಾಲಯವಾದ ಕಾರಣ, ಅನೇಕ ಸಂಶೋಧನ ಯೋಜನೆಗಳನ್ನು ಕೈಗೆತ್ತಿಕೊಳ್ಳುತ್ತಿದೆ. ಕಲಬುರಗಿಯ 'ಪಾಲಿ ಇನ್ಸ್ಟಿಟ್ಯೂಟ್' ಸಹಯೋಗದೊಂದಿಗೆ 'ಪಾಲಿ ಪದವಿಶ್ಲೇಷಕ–ಪದೋತ್ಪಾದಕ ಅಭಿವೃದ್ಧಿ ಯೋಜನೆ'ಯನ್ನು ವಿಶ್ವವಿದ್ಯಾಲಯವು ಕೈಗೊಂಡಿದೆ. ಈ ಯೋಜನೆಯನ್ನು ಪೂರ್ಣಗೊಳಿಸಲು ಸದರಿ ಸಂಸ್ಥೆಯೊಂದಿಗೆ ಒಡಂಬಡಿಕೆ ಮಾಡಿಕೊಳ್ಳಬೇಕಿದೆ. ಈ ಸಂಬಂಧ ಮುಂದಿನ ಕ್ರಮಗಳನ್ನು ವಹಿಸಲು ಪ್ರಶಾಸನ ಸಮಿತಿಯ ಅನುಮತಿಗಾಗಿ ಮಂಡಿಸಿದೆ. |
| | ನಿರ್ಣಯ | **'ಪಾಲಿ ಇನ್ಸ್ಟಿಟ್ಯೂಟ್' ಸಂಸ್ಥೆಯೊಂದಿಗೆ ಒಡಂಬಡಿಕೆ ಮಾಡಿಕೊಳ್ಳಲು ಸಭೆಯು ಒಪ್ಪಿಗೆ ಸೂಚಿಸಿತು.** |

**ವಿಷಯ 19**

**ವಿಷಯ ಮತ್ತು ಟಿಪ್ಪಣಿ**

**ವಿಶ್ವವಿದ್ಯಾಲಯದ 'ಕಾಲೇಜು ಅಭಿವೃದ್ಧಿ ನಿಗಮ'(CDC)ವನ್ನು ಪ್ರಾರಂಭಿಸಿ, ಸಂಯೋಜಕರನ್ನು ನಿಯೋಜಿಸುವ ಬಗೆಗೆ.**

ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಅಡಿಯಲ್ಲಿ ಒಟ್ಟು 30 ಕಾಲೇಜುಗಳು ಕಾರ್ಯನಿರ್ವಹಿಸುತ್ತಿದ್ದು, ಈ ಕಾಲೇಜುಗಳಿಗೆ ಸಂಬಂಧಿಸಿದಂತೆ 'ಕಾಲೇಜು ಅಭಿವೃದ್ಧಿ ನಿಗಮ'(College Development Council) ಅನ್ನು ಪ್ರಾರಂಭಿಸಿ, ಸೂಕ್ತ ಅಧ್ಯಾಪಕರೊಬ್ಬರನ್ನು ಈ ನಿಗಮದ ಸಂಯೋಜಕರನ್ನಾಗಿ ನಿಯೋಜಿಸಬಹುದಾಗಿದೆ. ಈ ಸಂಬಂಧ ಮುಂದಿನ ಕ್ರಮಗಳನ್ನು ವಹಿಸಲು ಪ್ರಶಾಸನ ಸಮಿತಿಯ ಅನುಮತಿಗಾಗಿ ಮಂಡಿಸಿದೆ.

**ನಿರ್ಣಯ**

**ವಿಶ್ವವಿದ್ಯಾಲಯದ 'ಕಾಲೇಜು ಅಭಿವೃದ್ಧಿ ನಿಗಮ'(CDC)ವನ್ನು ಪ್ರಾರಂಭಿಸಿ, ಡಾ. ವಿನಯ್ ಪಿ., ಸಹಾಯಕ ಪ್ರಾಧ್ಯಾಪಕರು, ಇವರನ್ನು ಸಂಯೋಜಕರನ್ನಾಗಿ ನಿಯೋಜಿಸಲು ಸಭೆಯು ಸೂಚಿಸಿತು.**

**ವಿಷಯ 20**

**ವಿಷಯ ಮತ್ತು ಟಿಪ್ಪಣಿ**

**ಬಿ.ಎ. ಮತ್ತು ಎಂ.ಎ. ಪರೀಕ್ಷೆಗಳ ಫಲಿತಾಂಶದ ಬಗೆಗೆ.**

ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯವು 2015–16ನೇ ಸಾಲಿನ ಬಿ.ಎ. ಮತ್ತು ಎಂ.ಎ. ಪರೀಕ್ಷೆಗಳನ್ನು ಯಶಸ್ವಿಯಾಗಿ ನಡೆಸಿದೆ. ಈ ಪರೀಕ್ಷೆಗಳಲ್ಲಿ ಒಟ್ಟು 2827 ವಿದ್ಯಾರ್ಥಿಗಳು ಹಾಜರಾಗಿದ್ದು, ಫಲಿತಾಂಶದ ವಿವರಗಳು ಕೆಳಗಿನಂತಿವೆ:

| ಕ್ರ ಸಂ. | ತರಗತಿಗಳು | ವೈಶಿಷ್ಟ್ಯ ಶ್ರೇಣಿ | ಪ್ರಥಮ ಶ್ರೇಣಿ | ದ್ವಿತೀಯ ಶ್ರೇಣಿ | ಉತ್ತೀರ್ಣ | ಅನುತ್ತೀರ್ಣ | ಗೈರು ಹಾಜರಿ | ತಡೆ ಹಿಡಿದಿದೆ | ಒಟ್ಟು |
|---|---|---|---|---|---|---|---|---|---|
| 01 | ಬಿ.ಎ.–I | 25 | 185 | 124 | 105 | 289 | 141 | 75 | **944** |
| 02 | ಬಿ.ಎ.–II | 48 | 258 | 106 | 26 | 155 | 49 | 26 | **668** |
| 03 | ಬಿ.ಎ.–III | 47 | 189 | 144 | 62 | 86 | 30 | 00 | **558** |
| 04 | ಎಂ.ಎ.–I | 62 | 108 | 93 | 24 | 87 | 23 | 15 | **412** |
| 05 | ಎಂ.ಎ.–II | 62 | 80 | 21 | 22 | 47 | 12 | 01 | **245** |
| | ಒಟ್ಟು | **244** | **820** | **488** | **239** | **664** | **255** | **117** | **2827** |

**ನಿರ್ಣಯ**

**ಬಿ.ಎ. ಮತ್ತು ಎಂ.ಎ. ಪರೀಕ್ಷೆಗಳ ಫಲಿತಾಂಶಕ್ಕೆ ಸಭೆಯು ಸಮ್ಮತಿಸಿತು.**

**ವಿಷಯ 21**

**ವಿಷಯ ಮತ್ತು ಟಿಪ್ಪಣಿ**

**2016–17ನೇ ಸಾಲಿನ ಎಂ.ಎ. ಪದವಿಗೆ Choice Based Credit System (CBCS) ಅಳವಡಿಸಿರುವ ಬಗೆಗೆ.**

ದಿನಾಂಕ: 14.03.2016ರಂದು ನಡೆದ ಪ್ರಶಿಕ್ಷಣ ಪರಿಷತ್ 17ನೇ ಸಭೆ ಹಾಗೂ ದಿನಾಂಕ: 16.03.2016 ರಂದು ನಡೆದ ಪ್ರಶಾಸನ ಸಮಿತಿ 32ನೇ ಸಭೆಯ ನಿರ್ಣಯದಂತೆ, ವಿಶ್ವವಿದ್ಯಾಲಯದ ಸಂಯೋಜಿತ ಕಾಲೇಜುಗಳಲ್ಲಿ 2016–17ನೇ ಸಾಲಿನ ವಿವಿಧ ಶಾಸ್ತ್ರಗಳ ಎಂ.ಎ. ಪದವಿಗೆ ಅಳವಡಿಸಲಾಗಿದೆ. ಈ ವಿಷಯವನ್ನು ಪ್ರಶಾಸನ ಸಮಿತಿಯ ಅವಗಾಹನೆಗಾಗಿ ಮಂಡಿಸಿದೆ.

**ನಿರ್ಣಯ**

**2016–17ನೇ ಸಾಲಿನ ಎಂ.ಎ. ಪದವಿಗೆ Choice Based Credit System (CBCS) ಅಳವಡಿಸುವ ಮೂಲಕ ವಿಶ್ವವಿದ್ಯಾಲಯ ಅನುದಾನ ಆಯೋಗದ ನಿಯಮಾನುಸಾರ ಪದವಿ ತರಗತಿ ನಡೆಸುತ್ತಿರುವುದಕ್ಕೆ ಸಭೆಯು ಅವಗಾಹನೆ ಮಾಡಿತು.**

**ವಿಷಯ 22**

**ವಿಷಯ ಮತ್ತು ಟಿಪ್ಪಣಿ**

**ಶ್ರೀ ಮೇಧಾ ದಕ್ಷಿಣಾಮೂರ್ತಿ ವೇದಭವನ ಸಂಸ್ಕೃತ ಕಾಲೇಜು, ಗೋಕರ್ಣ –ಈ ಕಾಲೇಜನ್ನು ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಘಟಕ ಕಾಲೇಜನ್ನಾಗಿ ಘೋಷಿಸುವ ಬಗೆಗೆ.**

ದಕ್ಷಿಣಕಾಶಿ ಎಂದೇ ಖ್ಯಾತವಾದ ಐತಿಹಾಸಿಕ ಹಾಗೂ ಪುರಾಣ ಪ್ರಸಿದ್ಧ ಕ್ಷೇತ್ರ ಗೋಕರ್ಣದಲ್ಲಿ ಶ್ರೀ ಮೇಧಾ ದಕ್ಷಿಣಾಮೂರ್ತಿ ವೇದ ಭವನ ಸಂಸ್ಕೃತ ಕಾಲೇಜು, ಗೋಕರ್ಣದ ವೇದಮೂರ್ತಿ ಹೊಸ್ಮನೆ ಶಾಸ್ತ್ರಿಗಳಿಂದ ಸ್ಥಾಪಿತವಾಗಿ ಮಹರ್ಷಿ ದೈವರಾತರಿಂದ ಪೋಷಿತವಾದ ಈ ಸಂಸ್ಥೆಯ ವಜ್ರ ಮಹೋತ್ಸವವು 1959 ರಲ್ಲಿ ಆಯೋಜಿತವಾದಾಗ ಭಾರತದ ರಾಷ್ಟ್ರಪತಿ ಡಾ. ಬಾಬು ರಾಜೇಂದ್ರಪ್ರಸಾದರು ಈ ಸಂಸ್ಥೆಗೆ ಭೇಟಿ ನೀಡಿರುತ್ತಾರೆ. ಉತ್ತರಪ್ರದೇಶದ ಕಾನ್ಪುರದ "ಭಾರತೀಯ ಚತುರ್ಧಾಮ ವೇದಭವನ ನ್ಯಾಸ" ದ ವರಿಷ್ಠರಾದ ಸ್ವರ್ಗೀಯ ಶ್ರೀ ಸತ್ಯದೇವ ಬ್ರಹ್ಮಚಾರಿಯವರು ಗೋಕರ್ಣದ ವೈದಿಕ ಪರಂಪರೆ, ಅಗ್ನಿಹೋತ್ರ ಮತ್ತು ವೇದಾಧ್ಯಯನಪರಿಪಾಟಿಗಳನ್ನು ಕಂಡು ಪ್ರಭಾವಿತರಾಗಿ ಗೋಕರ್ಣದಲ್ಲಿನ ಈ ಸಂಸ್ಥೆಯನ್ನು ನ್ಯಾಸಕ್ಕೆ ತೆಗೆದುಕೊಂಡು 1971 ರಲ್ಲಿ ಕರ್ನಾಟಕದ ಆಗಿನ ರಾಜ್ಯಪಾಲರಾದ ಶ್ರೀ ಧರ್ಮವೀರರ ಸಹಕಾರದಿಂದ ಈ ವಿದ್ಯಾಲಯವನ್ನು ಬೆಳೆಸಿ ಸರ್ಕಾರದ ಪೂರ್ಣಪ್ರಮಾಣದ ಅನುದಾನ ಹಾಗೂ ಖಾಯಂ ಮಾನ್ಯತೆಗಳನ್ನು ಪಡೆದರು. ಸರ್ಕಾರಿ ಆದೇಶ ಸಂಖ್ಯೆ: ಇಡಿ 13 ಪಿಎಸ್‌ಸಿ 73 ದಿನಾಂಕ: 30.10.1974 ರಂತೆ ವಿದ್ಯಾಲಯದ ನೌಕರರ ವೇತನ ಭತ್ಯೆ ನೀಡುವ ಕುರಿತು ಶಾಶ್ವತ ಅನುದಾನ ಮಂಜೂರಾಗಿರುತ್ತದೆ. ಹಾಗೂ 1976, 1984 ರಲ್ಲಿ ಒಟ್ಟು 21 ಬೋಧಕ ಹುದ್ದೆಗಳು ಮಂಜೂರಾಗಿದ್ದು ಈ ಪೈಕಿ ಬಹುತೇಕ ಎಲ್ಲಾ ಹುದ್ದೆಗಳನ್ನು ಭರ್ತಿ

| | | |
|---|---|---|
| | | ಮಾಡಲಾಗಿತ್ತು. ಆಗ ಹಲವು ವಿದ್ಯಾರ್ಥಿಗಳನ್ನು ಒಳಗೊಂಡು ರಾಜ್ಯದಲ್ಲಿಯೇ ಉತ್ತಮ ರೀತಿಯಲ್ಲಿ ನಡೆದ ನಂತರ ಖಾಲಿ ಹುದ್ದೆಗಳ ನೇಮಕವಾಗಿಲ್ಲ. ಪ್ರಸ್ತುತ ಎಲ್ಲಾ ಅಧ್ಯಾಪಕರು ನಿವೃತ್ತರಾಗಿ ಈಗ ಎಲ್ಲಾ 18 ಬೋಧಕ ಮತ್ತು 1 ಬೋಧಕೇತರ ಹುದ್ದೆ ಸೇರಿ ಒಟ್ಟು 19 ಹುದ್ದೆಗಳು ಖಾಲಿಯಾಗಿದ್ದು ವಿದ್ಯಾಲಯದ ಮತ್ತು ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಈ ಹುದ್ದೆಗಳು ಸದ್ಯದಲ್ಲಿಯೇ ಭರ್ತಿಯಾಗಬೇಕಾಗಿದೆ. ಈ ಕಾಲೇಜನ್ನು ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಘಟಕ ಕಾಲೇಜನ್ನಾಗಿ ಪರಿವರ್ತಿಸಲು ಪ್ರಶಾಸನ ಸಮಿತಿ ಸಭೆಗೆ ಮಂಡಿಸಲಾಗಿರುತ್ತದೆ. |
| | ನಿರ್ಣಯ | **ಶ್ರೀ ಮೇಧಾ ದಕ್ಷಿಣಾಮೂರ್ತಿ ವೇದಭವನ ಸಂಸ್ಕೃತ ಕಾಲೇಜು, ಗೋಕರ್ಣ –ಈ ಕಾಲೇಜನ್ನು ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಘಟಕ ಕಾಲೇಜನ್ನಾಗಿ ಪರಿವರ್ತಿಸಲು ಸರ್ಕಾರಕ್ಕೆ ಪತ್ರ ಬರೆದು ಅನುಮತಿ ಪಡೆದು ಕ್ರಮವಹಿಸಬಹುದೆಂದು ತಿಳಿಸಿತು ಮತ್ತು ಖಾಲಿ ಹುದ್ದೆಗಳನ್ನು ತುಂಬಲು ಕ್ರಮವಹಿಸಲು ಸಭೆಯು ಒಪ್ಪಿಗೆ ಸೂಚಿಸಿತು.** |

**ಪ್ರೊ. ವೈ.ಎಸ್. ಸಿದ್ದೇಗೌಡ**
ಸದಸ್ಯ ಕಾರ್ಯದರ್ಶಿ

**ಪ್ರೊ. ಪದ್ಮಾಶೇಖರ್**
ಅಧ್ಯಕ್ಷರು